ಜಿಲ್ಲಾವಾರು ವಾಣಿಜ್ಯ ಶಾಲೆಗಳ ಪಟ್ಟಿ

೧	ಬೆಂಗಳೂರು ನಗರ	...	೩೫
೨	ಬೆಂಗಳೂರು ಗ್ರಾಮಾಂತರ	...	೭೪
೩	ಕೋಲಾರ	...	೮೦
೪	ತುಮಕೂರು	...	೨೬
೫	ಮೈಸೂರು	...	೧೦
೬	ಮಂಡ್ಯ	...	೪೩
೭	ಮಂಗಳೂರು (ದಕ್ಷಿಣ ಕನ್ನಡ)	...	೧೪೬
೮	ಕೊಡಗು	...	೧೯
೯	ಚಿತ್ರದುರ್ಗ	...	೬೫
೧೦	ಚಿಕ್ಕಮಗಳೂರು	...	೩೯
೧೧	ಶಿವಮೊಗ್ಗ	...	೬೨
೧೨	ಹಾಸನ	...	೩೭
೧೩	ಧಾರವಾಡ	...	೯೨
೧೪	ಬೆಳಗಾಂ	...	೬೯
೧೫	ಬಿಜಾಪುರ	...	೫೯
೧೬	ಕಾರವಾರ (ಉತ್ತರ ಕನ್ನಡ)	...	೫೦
೧೭	ಗುಲ್ಬರ್ಗ	...	೪೯
೧೮	ರಾಯಚೂರು	...	೩೩
೧೯	ಬೀದರ್	...	೪೬
೨೦	ಬಳ್ಳಾರಿ		೪೪
		ಒಟ್ಟು	೧೪೬೬

ಅಧ್ಯಕ್ಷರು.—ಲಿಖಿತ ಮೂಲಕ ನೀಡಲಾದ ಪ್ರಶ್ನೋತ್ತರಗಳನ್ನು ಮಂಡಿಸಲಾಯಿತು. ಈಗ ೬೮ನೇ ನಿಯಮದ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪಕಾಲಾವಧಿ ಚರ್ಚೆ.

ರಾಜ್ಯದಲ್ಲಿ ಪಿ.ಯು.ಸಿ. ಸೇರಬಯಸುವ ವಿದ್ಯಾರ್ಥಿಗಳಿಗೆ ಹೆಚ್ಚಿನ ತರಗತಿಗಳನ್ನು ತೆರೆಯಲು ಒತ್ತಾಯ

ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಸನ್ಮಾನ್ಯ ಸಭಾಧ್ಯಕ್ಷರೇ, ತಮ್ಮ ಮೂಲಕ ನಾನು ಮಾನ್ಯ ಶಿಕ್ಷಣ ಸಚಿವರ ಗಮನಕ್ಕೆ ಒಂದು ವಿಚಾರವನ್ನು ತರುವುದಕ್ಕೆ ಬಯಸುತ್ತೇನೆ. ಇದು ಬಹಳ ಮುಖ್ಯವಾದಂಥ ವಿಷಯವಾಗಿದೆ. ಮಾನ್ಯ ಶಿಕ್ಷಣ ಸಚಿವರು ತಮ್ಮ ಬೇಡಿಕೆಗಳ ಮೇಲೆ ಮಾತನಾಡ ತಕ್ಕಂಥ ಸಂದರ್ಭದಲ್ಲಿ ಬೆಂಗಳೂರು ನಗರದಲ್ಲಿ ಮತ್ತು ರಾಜ್ಯಾದ್ಯಂತ ಎಸ್ ಎಸ್ಎಲ್ಸಿ ಪಾಸ್ ಆದ ವಿದ್ಯಾರ್ಥಿಗಳಿಗೆ ಪಿಯುಸಿ ಶಿಕ್ಷಣಕ್ಕೆ ಪ್ರವೇಶ ನಿರಾಕರಣೆ ಮಾಡಿದಂಥ ಸನ್ನಿವೇಶದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಪ್ರವೇಶ ಬಯಸುವ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದಾಗಿ ಅಂಥ ಕಾಲೇಜುಗಳಲ್ಲಿ ಸೆಕ್ಷನ್ಸ್‌ನ್ನು ಹೆಚ್ಚು ಮಾಡುತ್ತೇವೆ ಮತ್ತು ಅಡ್ಮಿಷನ್ ಹೆಚ್ಚುಮಾಡುತ್ತೇವೆ ಎಂದ

ಕೂಡ ಹೇಳಿದ್ದಾರೆ. ಇವೊತ್ತು ೨೦-೨೫ ಸಾವಿರ ಜನಸಂಖ್ಯೆ ಇರತಕ್ಕಂಥ ಪಟ್ಟಣಗಳಲ್ಲಿ ಸಹಿತ ಅಲ್ಲಿರ ತಕ್ಕಂಥ ಒಂದೆರಡು ಕಾಲೇಜುಗಳಲ್ಲಿ ಪ್ರತಿಯೊಬ್ಬರೂ ತಮ್ಮಲ್ಲಿಯೆ ಸೆಕ್ಷನ್‌ಗಳನ್ನು ಹೆಚ್ಚಿಗೆ ಮಾಡ ಬೇಕೆಂಬುದನ್ನು ಸರಕಾರದ ಗಮನಕ್ಕೆ ತಂದಿದ್ದಾರೆ ಇದರಿಂದ ಬೆಂಗಳೂರು ನಗರದಲ್ಲಂತೂ ಭಾರಿ ದೊಡ್ಡ ತೊಂದರೆಯಾಗಿದೆ. ಅನೇಕ ಕಾಲೇಜುಗಳಲ್ಲಿ ೫೫-೬೦ ಪರ್‌ಸೆಂಟ್‌ನಷ್ಟು ಅಂಕಗಳನ್ನು ತೆಗೆದು ಕೊಂಡವರಿಗೂ ಫ್ರೀ ಯುನಿವರ್ಸಿಯಲ್ಲಿ ಅಡ್ಮಿಷನ್ ಸಿಕ್ಕಿಲ್ಲ ಇದೊಂದು ಬಹಳ ದೊಡ್ಡ ಸಮಸ್ಯೆಯಾಗಿದೆ ದೊಡ್ಡ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಸೀಟು ಸಿಗದೆ ನಿರಾಶರಾಗಂಥ ಸಂದರ್ಭ ಬಂದಿದೆ. ಆದುದರಿಂದ ಪ್ರವೇಶ ಬಯಸುವಂಥ ವಿದ್ಯಾರ್ಥಿಗಳಿಗೆ ಸಕಾಲದಲ್ಲಿ ಪ್ರವೇಶ ದೊರಕಿಸಿಕೊಡುವಂಥ ಒಂದು ವಾತಾವರಣ ವನ್ನು ಕಲ್ಪಿಸಿಕೊಡಬೇಕು. ಈ ದಿಶೆಯಲ್ಲಿ ದಯವಾಡಿ ಸರಕಾರದ ಆಜ್ಞೆಯನ್ನು ಹೊರಡಿಸಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಅದೇ ರೀತಿಯಲ್ಲಿ ಮಾನ್ಯ ಸಭಾನಾಯಕರು ಮೊನ್ನೆ ದಿವಸ ಮಾತನಾಡತಕ್ಕಂಥ ಸಂದರ್ಭದಲ್ಲಿ ಮತ್ತು ಅವರು ಇತ್ತೀಚೆಗೆ ದೆಹಲಿಗೆ ಹೋದಂಥ ಸಂದರ್ಭದಲ್ಲಿ ಕೊಂಕಣ ರೈಲ್ವೆ ಬಗ್ಗೆ ಹೇಳಿಕೆಯನ್ನು ಕೊಡುತ್ತೇನೆ ಎಂದು ಹೇಳಿದ್ದಾರೆ. ಆ ಬಗ್ಗೆ, ಮಾನ್ಯರು ಹೇಳಿಕೆ ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್ —ಮಾನ್ಯ ಸದಸ್ಯರು ಹೇಳುವಂಥ ವಿಚಾರಗಳು ನನ್ನ ಗಮನಕ್ಕೆ ಬಂದಿದೆ. ಅವರು ೫೫-೬೦ ಪರ್‌ಸೆಂಟ್‌ನವರಿಗೆ ಸೀಟು ಸಿಗಲಿಲ್ಲ ಎಂದು ಹೇಳಿದ್ದಾರೆ. ಸುಮಾರು ೬೫-೭೦ ಪರ್‌ಸೆಂಟ್ ತೆಗೆದುಕೊಂಡಂತಹ ವಿದ್ಯಾರ್ಥಿಗಳಿಗೂ ಕೂಡ ನಗರದಲ್ಲಿ ಪಿಯುಸಿಗೆ ಸೀಟ್ ಸಿಗುತ್ತಾ ಇಲ್ಲ ಯಾವ ಕಾಲೇಜಿನವರು ಹೊಸದಾಗಿ ಹೆಚ್ಚಿಗೆ ಸೆಕ್ಷನ್‌ಗಳನ್ನು ಮಾಡುತ್ತೇವೆ ಎಂದು ಹೇಳಿದ್ದಾರೆ ಅವರಿಗೆ ನಾವು ನಿರಾಕರಣೆ ಮಾಡುವುದಿಲ್ಲ ಕೊಡುತ್ತೇವೆ ಅಷ್ಟೇ ಅಲ್ಲ, ಯಾರಾದರೂ ಹೊಸದಾಗಿ ಕಾಲೇಜುಗಳನ್ನು ಮಾಡುವುದಕ್ಕೆ ಆರ್ಜಿಗಳನ್ನು ಹಾಕಿದ್ದಾರೆ ಆ ಭಾಗಗಳನ್ನು ನೋಡಿಕೊಂಡು ಅದನ್ನು ಕೂಡ ಸರಕಾರ ಪರಿಶೀಲನೆ ಮಾಡುತ್ತದೆ, ವಿಳಂಬವಿಲ್ಲದೆ ತತ್‌ಕ್ಷಣವೇ ಆ ಬಗ್ಗೆ ಅಧಿಕಾರಿಗಳ ಜೊತೆ ಮಾತನಾಡುತ್ತೇನೆ.

ಡಾ॥ ಜೀವರಾಜ ಆಳ್ವ...ಖಾಸಗಿ ಶಿಕ್ಷಣ ಸಂಸ್ಥೆಗಳು ಬೆಂಗಳೂರಿನಲ್ಲಿ ಜಾಸ್ತಿ ಇವೆ. ಅವರು ಹೊಸ ತರಗತಿಗಳನ್ನು ಮಾಡುತ್ತೇವೆ ಎಂದು ನಿಮ್ಮನ್ನು ಕೇಳುವುದು ಕಡಿಮೆ, ಆದುದರಿಂದ ಶಿಕ್ಷಣ ಸಂಸ್ಥೆಗಳ ವ್ಯವಸ್ಥಾಪಕರುಗಳನ್ನು ಕರೆಯಿಸಿಕೊಂಡು ಈ ಪರಿಸ್ಥಿತಿಯ ನಿವಾರಣೆಗಾಗಿ ಅವರು ಹೊಸ ತರಗತಿ ಗಳನ್ನು ತೆರೆಯುವಲ್ಲಿ ಒತ್ತಾಯವನ್ನು ತರಬೇಕಾಗುತ್ತದೆ. ಹೊಸ ತರಗತಿಗಳನ್ನು ತೆರೆಯಿಸ ಬೇಕಾಗುತ್ತದೆ, ಇಲ್ಲದಿದ್ದರೆ ಆಗುವುದಿಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—ಬೆಂಗಳೂರಿನ ಕೆಲವು ಪ್ರತಿಷ್ಠಿತ ಕಾಲೇಜುಗಳಲ್ಲಿ ಅದಕ್ಕಿಂತ ಕಿಳಗಡೆ ಅಂಕಗಳನ್ನು ಗಳಿಸಿದವರಿಗೆ ಕೊಡುತ್ತಾ ಇಲ್ಲ ಎನ್ನುವುದು ನನ್ನ ಗಮನಕ್ಕೆ ಬಂದಿದೆ. ೮೭ ಪರ್‌ಸೆಂಟ್‌ಗೆ ನಿಲ್ಲಿಸಿದ್ದಾರೆ. ಇಂಥ ಒಂದು ಪರಿಸ್ಥಿತಿಯಲ್ಲಿ ಸಮಸ್ಯೆಯನ್ನು ಹೇಗೆ ಪರಿಹರಿಸಬೇಕೆಂಬು ವಿಚಾರ ಮಾಡಿ, ಖಾಸಗಿ ಸಂಸ್ಥೆಯವರನ್ನು ಮತ್ತೆ ಅಧಿಕಾರಿಗಳನ್ನು ಕರೆದು ಆ ಬಗ್ಗೆ ಸೂಕ್ತ ಚರ್ಚೆ ಮಾಡಿ ಕಾರ್ಯಕ್ರಮವನ್ನು ಕೈಗೊಳ್ಳುತ್ತೇನೆ.

ನಿಯಮ ೬೮ರ ಮೇರೆಗೆ

ದೂರವಾಣಿ ಕದ್ದಾಲಿಕೆ ಬಗ್ಗೆ ಚರ್ಚೆ

ಶ್ರೀ ಕೆ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೆ, ನಾನು ಟೆಲಿಫೋನ್ ಕದ್ದಾಲಿಕೆ ವಿಚಾರದಲ್ಲಿ ಒಂದು ಪ್ರಿವಿಲೇಜ್ ಮೋಷನ್‌ನನ್ನು ಕಳುಹಿಸಿದ್ದೇನೆ ತಾವುಗಳು ನಿಯಮ ೬೮ರ ಪ್ರಕಾರ ಚರ್ಚಿಸಲು ಈ ಒಂದು ತೀರ್ಮಾನ ತೆಗೆದುಕೊಂಡಿದ್ದೀರಿ. ಅದಕ್ಕೆ ಮೊದಲು ಈ ಪ್ರಿವಿಲೇಜ್ ಮೋಷನ್ ಬಗ್ಗೆ ತಾವು ತೀರ್ಮಾನ ಮಾಡಬೇಕಾಗಿದೆ. "It is under consideration" ಎಂದು ತಮ್ಮ ಕಚೇರಿಯಲ್ಲಿ ನನಗೆ ಹೇಳಿದ್ದಾರೆ. ಈಗ ಅದು ಯಾವ ಸ್ಟೇಜ್‌ನಲ್ಲಿದೆ ಎಂದು ದಯವಾಡಿ ಹೇಳಬೇಕು ಈ ಪ್ರಿವಿಲೇಜ್ ಮೋಷನ್ ತೆಗೆದುಕೊಳ್ಳಬೇಕು. ಇದು ಬಹಳ ಮಹತ್ವವಾದಂಥ ವಿಚಾರ ಹಿಂದೆ ಮಾನ್ಯ ಮುಖ್ಯ ಮಂತ್ರಿಗಳಾಗಿದ್ದಂಥ ರಾಮಕೃಷ್ಣ ಹೆಗಡೆಯವರು ಟೆಲಿಫೋನ್ ಕದ್ದಾಲಿಕೆ ವಿಚಾರದಲ್ಲಿ.....

ಶ್ರೀ ವಾಟಾಳ್ ನಾಗರಾಜ್.—ಈಗ ಚರ್ಚೆಗೆ ಒಂದು ಸೂಚನೆ ಇರುವಾಗ ಮತ್ತೊಂದು ಸೂಚನೆಯನ್ನು ತರಬಹುದೆ ?